12) **ಮತದಾರರ ಪಟ್ಟಿ**

13) **ರೇಷನ್ ಕಾರ್ಡ್**

14) **ವಾಸಸ್ಥಳ ದೃಢೀಕರಣ ಪತ್ರ**

–ಮೇಲ್ಕಂಡ ದಾಖಲಾತಿಗಳ ಜೊತೆಗೆ ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರರು ಹಾಗೂ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಸ್ಥಳ ಮಹಜರ್ ವರದಿಯ ಆಧಾರದ ಮೇಲೆ ಸಿಂಧುತ್ವ ಪ್ರಮಾಣ ಪತ್ರ ವಿತರಿಸಲಾಗುವುದು.

ಆ) ಅಭ್ಯರ್ಥಿಯ ಶಾಲಾ ದಾಖಲಾತಿಗಳಲ್ಲಿ ನಾಯಕ ಎಂದಿದ್ದು ತಂದೆ ಜಾತಿ ಪರಿವಾರ ನಾಯಕ ಎಂದಿರುವವರಿಗೆ ಹಾಗೂ ಅಭ್ಯರ್ಥಿಯ ಶಾಲಾ ದಾಖಲಾತಿಯಲ್ಲಿ ಪರಿವಾರ ನಾಯಕ ತಂದೆ ಜಾತಿ ನಾಯಕ ಎಂದಿರುವ ಪ್ರಕರಣಗಳ ಸಿಂಧುತ್ವ ಪ್ರಮಾಣ ಪತ್ರ ನೀಡಲು ಕೋರಿ ಸಲ್ಲಿಕೆಯಾಗಿರುವುದಿಲ್ಲ. ಪ್ರವರ್ಗ–1 ರ ಸಿಂಧುತ್ವ ಪ್ರಮಾಣ ಪತ್ರಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ನೀಡಲಾಗುತ್ತಿಲ್ಲ.

ವಸತಿ ನಿಲಯಗಳ ದುರಸ್ತಿ

2661 (3188); ಡಾ॥ ಅಜಯ್ ಸಿಂಗ್ (ಜೇವರ್ಗಿ)

ಅ) ಕಲಬುರ್ಗಿ ಜಿಲ್ಲೆಯಲ್ಲಿ ಕಳೆದ 15–20 ವರ್ಷಗಳ ಹಿಂದೆ ನಿರ್ಮಾಣಗೊಂಡ ವಸತಿ ನಿಲಯಗಳೆಷ್ಟು ಅವುಗಳ ಈಗಿನ ಪರಿಸ್ಥಿತಿ ಏನು ಅದರಲ್ಲಿ ಜೇವರ್ಗಿ ತಾಲ್ಲೂಕಿನಲ್ಲಿರುವ ವಸತಿ ನಿಲಯಗಳೆಷ್ಟು;

ಆ) 15–20 ವರ್ಷಗಳ ಹಿಂದೆ ನಿರ್ಮಾಣಗೊಂಡ ವಸತಿ ನಿಲಯಗಳು ಆಗಿನ ವ್ಯವಸ್ಥೆಗೆ ತಕ್ಕಂತೆ ನಿರ್ಮಾಣಗೊಂಡಿದ್ದು 3–4 ಕೋಟೆಗಳಿಂದ ಕೂಡಿವೆ ಈಗಿನ ಕಟ್ಟಡ ವಿನ್ಯಾಸ ಮತ್ತು ಆಗಿನ ವಿನ್ಯಾಸದಲ್ಲಿ ಮತ್ತು ವ್ಯವಸ್ಥೆಯಲ್ಲಿ ವ್ಯತ್ಯಾಸವೇನಾದರೂ ಇದೆಯೇ;

ಇ) ಜೇವರ್ಗಿ ತಾಲ್ಲೂಕಿನಲ್ಲಿ 15–20 ವರ್ಷಗಳ ಹಿಂದೆ ನಿರ್ಮಾಣಗೊಂಡ ವಸತಿ ನಿಲಯಗಳಲ್ಲಿ ಸಮರ್ಪಕವಾದ ಕುಡಿಯುವ ನೀರು,

ಶೌಚಾಲಯ ಮತ್ತು ಇತರೆ ಸಾಮಾನ್ಯ ಕೊರತೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸದರಿ ಕೊರತೆಗಳನ್ನು ನೀಗಿಸಲು ಸರ್ಕಾರದಿಂದ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಕಲಬುರ್ಗಿ ಜಿಲ್ಲೆಯಲ್ಲಿ ಇಲಾಖೆಯ ವತಿಯಿಂದ 97 ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದ್ದು, 77 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡಗಳನ್ನು ಹೊಂದಿರುತ್ತವೆ. ಈ ಪೈಕಿ ಕಳೆದ 15–20 ವರ್ಷಗಳ ಹಿಂದೆ 49 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ಇದರಲ್ಲಿ ಜೇವರ್ಗಿ ತಾಲ್ಲೂಕಿನ 07 ವಿದ್ಯಾರ್ಥಿ ನಿಲಯಗಳು ಸೇರಿದ್ದು, ಎಲ್ಲಾ ವಿದ್ಯಾರ್ಥಿ ನಿಲಯಗಳು ಸುಸ್ಥಿತಿಯಲ್ಲಿರುತ್ತವೆ.

ಆ) ಹೌದು.

ಅಗತ್ಯವಿರುವ ಕಡೆ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗನುಗುಣವಾಗಿ ಹೆಚ್ಚುವರಿ ವಾಸದ ಕೊಠಡಿ, ಶೌಚಾಲಯ ಮತ್ತು ಸ್ನಾನಗೃಹಗಳ ಕೊಠಡಿಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗಿರುತ್ತದೆ.

ಇ) ಹೌದು.

ಈ) 2011–12 ಮತ್ತು 2012–13ನೇ ಸಾಲಿನಲ್ಲಿ ₹ 117.30 ಲಕ್ಷಗಳ ವೆಚ್ಚದಲ್ಲಿ ಜೇವರ್ಗಿ ತಾಲ್ಲೂಕಿನ 07 ವಿದ್ಯಾರ್ಥಿ ನಿಲಯಗಳ ಕಟ್ಟಡಗಳಲ್ಲಿ ಅಗತ್ಯ ದುರಸ್ತಿ ಹಾಗೂ ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

2013–14ನೇ ಸಾಲಿನಲ್ಲಿ ತಾಲ್ಲೂಕಿನ 05 ವಿದ್ಯಾರ್ಥಿ ನಿಲಯಗಳಲ್ಲಿ

₹ 124.70 ಲಕ್ಷಗಳ ವೆಚ್ಚದಲ್ಲಿ ಹೆಚ್ಚುವರಿಯಾಗಿ 08 ವಾಸದ ಕೊಠಡಿಗಳು, 12 ಶೌಚಾಲಯಗಳು, 12 ಸ್ನಾನಗೃಹಗಳ ನಿರ್ಮಾಣ ಹಾಗೂ ಇನ್ನಿತರೆ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗಿರುತ್ತದೆ.

Karnataka Evaluation Authority ಬಗ್ಗೆ

2662 (3269); ಡಾ॥ ಅಜಯ್ ಸಿಂಗ್ (ಜೇವರ್ಗಿ)

ಅ) ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಯಾವ ದಿನಾಂಕದಿಂದ ಅಸ್ಥಿತ್ವಕ್ಕೆ ಬಂದಿದೆ?

ಆ) ಇದರ ಕಾರ್ಯ ವಿಧಾನವೇನು; ಇದುವರೆಗೂ ಎಷ್ಟು ಮೌಲ್ಯಮಾಪನಗಳನ್ನು ತೆಗೆದುಕೊಳ್ಳಲಾಗಿದೆ ಇದಕ್ಕೆ ತಗುಲಿದ ವೆಚ್ಚವೆಷ್ಟು; ಯಾವ ಎಜನ್ಸಿಗೆ ನೀಡಲಾಗಲಿದೆ ವರದಿ ಸಲ್ಲಿಸಲು ನೀಡಿದ ಸಮಯವೆಷ್ಟು ಹಾಗೂ ವಿಳಂಬವಾಗಿ ವರದಿ ಸಲ್ಲಿಸಿದವರ ವಿವರ ನೀಡುವುದು.

ಇ) ಈ ಪ್ರಾಧಿಕಾರಕ್ಕೆ ನಿರ್ದೇಶಕರು ಮತ್ತು ಇತರೆ ಹುದ್ದೆಗಳನ್ನು ಭರ್ತಿ ಮಾಡುವಾಗ ಅನುಸರಿಸಿದ ಮಾನದಂಡಗಳೇನು;

ಈ) ಮೌಲ್ಯಮಾಪನ ವರದಿ ಬಂದ ನಂತರ ವರದಿಯಲ್ಲಿ ಶಿಫಾರಸ್ಸು ಅಥವಾ ನ್ಯೂನತೆಗಳ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ದಿನಾಂಕ: 05.09.2011 ರಂದು ಕರ್ನಾಟಕ ಸರ್ಕಾರದ ಆದೇಶದ ಸಂಖ್ಯೆ: ಪಿಡಿ/20/ಇವಿಎನ್/2011 ರಂದು ಅಸ್ಥಿತ್ವಕ್ಕೆ ಬಂದಿದೆ.